**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ**

**ಶ್ರೀ ಭಗವದ್ಗೀತಾ ಅಭಿಯಾನ – 2025**

**ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ, ಸೋಂದಾ, ಶಿರಸಿ**

**ಶ್ರೀ ಭಗವದ್ಗೀತಾ ಅಭಿಯಾನ ಜಿಲ್ಲಾ ಸಮಿತಿ , ಸ್ವರ್ಣರಶ್ಮೀ ಟ್ರಸ್ಟ್ (ರಿ,) ಶಿವಮೊಗ್ಗ**

**ಅಭಿಯಾನದ ವರದಿ**

ಮಾನ್ಯರೇ,

It gives me immense pleasure to present before you the brief report of SHREE BHAGAVADGEETA ABHIYAANA 2025 wich is being conducted in Shivamogga and also all over karnaataka.

ಭಗವದ್ಗೀತೆಯನ್ನು, ಭಗವದ್ಗೀತೆಯಲ್ಲಿ ಇರುವ ಜೀವನ ಮೌಲ್ಯಗಳನ್ನು ಜನರಿಗೆ ಕೋಡುವ ಕಾರ್ಯ ನಿರಂತರವಾಗಿ ನಡೆಯಬೇಕು ಎಂಬ ಉದ್ದೇಶದಿಂದ ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನ ಇವರು ಪ್ರಾರಂಭಿಸಿದರು. ಅವರ ದಿವ್ಯ ಸಂಕಲ್ಪದ ಶ್ರೀ ಭಗವದ್ಗೀತಾ ಅಭಿಯಾನ 2025 ಶಿವಮೊಗ್ಗ ಕೇಂದ್ರಿತ ರಾಜ್ಯಮಟ್ಟದ ಅಭಿಯಾನವು ಅತ್ಯಂತ ಯಶಸ್ವಿಯಾಗಿ ಸಾಗಿ ಬಂದಿದೆ. ಈ ವರ್ಷದ ಅಭಿಯಾನವು ಶಿವಮೊಗ್ಗದಲ್ಲಿ ನಡೆದಿರುವುದು ನಮ್ಮೆಲ್ಲರ ಭಾಗ್ಯವಾಗಿದೆ. ಈ ಅಭಿಯಾನದ ಸಂಕ್ಷಿಪ್ತ ವರದಿಯನ್ನು ವಾಚಿಸುತ್ತಿದ್ದೇನೆ.

1. ದಿನಾಂಕ 18/6/2025 ರಂದು ಪರಮಪೂಜ್ಯ ಶ್ರೀ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರು ಪ್ರಥಮವಾಗಿ ಶಿವಮೊಗ್ಗಕ್ಕೆ ಆಗಮಿಸಿ ಅಭಿಯಾನದ ರೂಪುರೇಷೆಗಳನ್ನು ಹಾಕಿಕೊಟ್ಟರು. ಅಭಿಯಾನದ ಅಂಗವಾಗಿ ಒಂದು ಪೂರ್ವಭಾವಿ ಸಭೆಯನ್ನು ಏರ್ಪಡಿಸಿ ನಮ್ಮೆಲ್ಲರಲ್ಲಿ ಉತ್ಸಾಹವನ್ನು ತುಂಬಿದರು. ಶ್ರೀ ಶ್ರೀಗಳವರು ಜಿಲ್ಲಾ ಸಮಿತಿಯನ್ನು ಘೋಷಣೆ ಮಾಡಿದರು. ಮುಂದಿನ ದಿನಗಳಲ್ಲಿ ಜಿಲ್ಲಾ ಸಮಿತಿಯವರು ಸ್ವಾಮಿಜಿಯವರ ಸೂಚನೆಯಂತೆ ಸಾಗರ, ಸೊರಬ, ಶಿಕಾರಿಪುರ, ಭದ್ರಾವತಿ, ತೀರ್ಥಹಳ್ಳಿ ಹಾಗೂ ಹೊಸನಗರ ಹೀಗೆ ಎಲ್ಲಾ ತಾಲೂಕುಗಳಿಗೆ ತೆರಳಿ ಶಿವಮೊಗ್ಗ ಜಿಲ್ಲೆಯ, ತಾಲೂಕು ಸಮಿತಿಗಳನ್ನು ರಚಿಸಿ ತಾಲೂಕು ಸಮಿತಿಗಳ ಮುಖಾಂತರ ಜಿಲ್ಲೆಯಾದ್ಯಂತ ಶ್ಲೋಕಕೇಂದ್ರಗಳನ್ನು ಹಾಗೂ ಉಪನ್ಯಾಸಕೇಂದ್ರಗಳನ್ನು ತೆರೆಯಲಾಯಿತು. ನಂತರ ಈ ಅಭಿಯಾನವು ಮತ್ತಷ್ಟು ವೇಗವನ್ನು ಪಡೆದುಕೊಂಡಿತು.
2. ಹಲವು ವರ್ಷಗಳಿಂದ ಗೀತಾಪಠಣವನ್ನು ಮಾಡಿದ, ಅದರ ಪರಿಚಯ ಇರುವ ಮಾತೆಯರನ್ನು ಗುರುತಿಸಿ, ಅವರ ಮುಖಾಂತರ ಮಾತೆಯರಿಗೆ ಪ್ರಶಿಕ್ಷಣ ನೀಡಿದ್ದೇವೆ. ಪ್ರಶಿಕ್ಷಣ ಪಡೆದವರ ಮೂಲಕ ಶಿವಮೊಗ್ಗ ನಗರ ಹಾಗೂ ಶಿವಮೊಗ್ಗ ಸೇರಿದಂತೆ ರಾಜ್ಯದ ಉಳಿದ ಜಿಲ್ಲೆಯ ಎಲ್ಲಾ ತಾಲೂಕುಗಳ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಭಗವದ್ಗೀತೆಯನ್ನು ಕಲಿಸಲು ತೊಡಗಿಸಲಾಯಿತು.
3. ದಿನಾಂಕ 25–10–2025 ರಂದು ಈ ವರ್ಷದ ಶ್ರೀ ಭಗವದ್ಗೀತಾ ಅಭಿಯಾನ ಅಧಿಕೃತವಾಗಿ ಉದ್ಘಾಟನೆಗೊಂಡಿತಾದರೂ, ಅದಕ್ಕೂ ಮೊದಲು ಹಾಗೂ ನಂತರ ಶಿವಮೊಗ್ಗ ಜಿಲ್ಲೆಯಾದ್ಯಂತ ಅಂದರೆ ಎಲ್ಲಾ ತಾಲೂಕುಗಳ ಶಾಲೆಗಳಲ್ಲಿ, ದೇವಸ್ಥಾನಗಳಲ್ಲಿ ಹಾಗೂ ಭಜನಾಮಂಡಳಿಗಳಲ್ಲಿ ಶ್ಲೋಕಕೇಂದ್ರ–ಉಪನ್ಯಾಸಕೇಂದ್ರಗಳನ್ನು ಮಾಡಿ ಅಲ್ಲಿ ವಿದ್ಯಾರ್ಥಿಗಳಿಗೆ, ಮಾತೆಯರಿಗೆ, ಹಾಗೂ ಸಾರ್ವಜನಿಕರಿಗೆ 11 ನೇ ಅಧ್ಯಾಯದ ಶ್ಲೋಕಗಳನ್ನು ಕಲಿಸಲಾಯಿತು.

4. ಶಿವಮೊಗ್ಗಾ ಜಿಲ್ಲೆಯಲ್ಲಿ ಆದ ಶ್ಲೋಕಕೇಂದ್ರಗಳು – ಶಿವಮೊಗ್ಗ ನಗರ – 195, ಸಾಗರ–18, ಭದ್ರಾವತಿ –15. ಹೊಸನಗರ–12, ಶಿಕಾರಿಪುರ– 9, ತಿರ್ಥಹಳ್ಳಿ–6, ಸೊರಬ– 25 ಒಟ್ಟಾರೆ ಶಿವಮೊಗ್ಗ ಜಿಲ್ಲೆಯಲ್ಲಿ 280ಕ್ಕೂ ಹೆಚ್ಚು ಶ್ಲೋಕಕೇಂದ್ರಗಳ ಮುಖಾಂತರ ಸುಮಾರು 16000 ವಿದ್ಯಾರ್ಥಿಗಳನ್ನು ಹಾಗೂ 5200 ಸಾರ್ವಜನಿಕರನ್ನು ಗೀತೆಯು ತಲುಪಿರುವುದು ಶಿವಮೊಗ್ಗ ಜಿಲ್ಲೆಯ ಒಂದು ವಿಶೇಷ ಸಾಧನೆಯಾಗಿದೆ.

**5**. ಅದೇ ರೀತಿ ಉಪನ್ಯಾಸಗಳು – ಶಿವಮೊಗ್ಗ ನಗರ – 107, ಸಾಗರ– 11, ಭದ್ರಾವತಿ–10, ಹೊಸನಗರ–13, ಶಿಕಾರಿಪುರ–3, ತೀರ್ಥಳ್ಳಿ–1, ಸೊರಬ –11 ಒಟ್ಟಾರೆ ಜಿಲ್ಲೆಯಲ್ಲಿ 150 ಕ್ಕೂ ಹೆಚ್ಚು ಉಪನ್ಯಾಸಗಳು ನಡೆದಿವೆ. ವಿಶೇಷವಾಗಿ 6 ಕ್ಕೂ ಹೆಚ್ಚು ಸಪ್ತಾಹದ ಉಪನ್ಯಾಸಗಳು ನಡೆದಿವೆ. ಇದು ಈ ವರೆಗೆ ಬೇರೆ ಯಾವ ಜಿಲ್ಲೆಯಲ್ಲೂ ನಡೆದಿಲ್ಲ.

**6**. ರಾಜ್ಯದ ಬೇರೆ ಜಿಲ್ಲೆಗಳಿಂದ 2074 ಕ್ಕೂ ಹೆಚ್ಚು **ಶ್ಲೋಕಕೇಂದ್ರಗಳಾಗಿವೆ.** (ಇದರಲ್ಲಿ 1175 ಶ್ಲೋಕಕೇಂದ್ರಗಳು ಉತ್ತಕನ್ನಡ ಜಿಲ್ಲೆಯಲ್ಲಿ ಆಗಿವೆ.) ಕಳೆದ ವರ್ಷಕ್ಕಿಂತ ಸುಮಾರು 450 ಶ್ಲೋಕಕೇಂದ್ರಗಳು ಹೆಚ್ಚಾಗಿವೆ. ಅನೇಕ ಶಾಲೆಗಳು, ದೇವಸ್ಥಾನಗಳು, ಮನೆಗಳಲ್ಲಿ, ಕಲ್ಯಾಣಮಂಟಪಗಳಲ್ಲಿ ನಡೆದಿವೆ. ಇದೇ ರೀತಿ ಇಡೀ ರಾಜ್ಯದಲ್ಲಿ ಸುಮಾರು 300 ಕ್ಕೂ ಹೆಚ್ಚು **ಉಪನ್ಯಾಸಗಳು ಆಗಿವೆ. ಒಟ್ಟು ಸುಮಾರು 60000 ಜನರನ್ನು ಈ ಅಭಿಯಾನವು ನೇರವಾಗಿ ತಲುಪಿದೆ ಎಂದು ಹೇಳಲು ಹೆಮ್ಮೆಯಾಗುತ್ತದೆ.**

**7**. ಶ್ರೀ ಭಗವದ್ಗೀತೆಯ ಕಲಿಕೆಯು ಅಂತರ್ಜಾಲ ಮಾಧ್ಯಮದ ಮೂಲಕವೂ ನಡೆಯುತ್ತಿದೆ. ವಿಜಯ ದಶಮಿಯ ಶುಭ ಮುಹೂರ್ತದಲ್ಲಿ ಆರಂಭಗೊಂಡು ಈ ವರೆಗೆ ಸುಮರು 1350 ಅಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನುರಿತ ಶಿಕ್ಷಕರ ಮೂಲಕ ಭಗವದ್ಗೀತೆಯನ್ನು ಕಲಿಸಲಾಗುತ್ತಿದೆ.

8. **ಶಿವಮೊಗ್ಗದಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳು–**

- ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದಲ್ಲಿ 18–11–2025 ರಂದು "ಭಗವದ್ಗೀತೆ ಮತ್ತು ಅಪರಾಧ ನಿಯಂತ್ರಣ" ಎಂಬ ವಿಷಯದ ಬಗ್ಗೆ ಒಂದು ದಿನದ ಐತಿಹಾಸಿಕ ವಿಚಾರ ಸಂಕಿರಣ ನಡೆಯಿತು.
- ಪ್ರೇರಣ ಶಿಕ್ಷಣ ಸಂಸ್ಥೆಯ ಅಂಗ ಸಂಸ್ಥೆಯಲ್ಲಿ "Managerial Essence from Bhagavadgeetha for future Professionals" ಎಂಬ ವಿಷಯದ ಕುರಿತು ವಿಶೇಷ ವಿಚಾರ ಗೋಷ್ಠಿ ನಡೆಸಲಾಯಿತು.
- ಸರಕಾರಿ ಆಯುರ್ವೇದ ಕಾಲೇಜಿನಲ್ಲಿ "ಭಗವದ್ಗೀತೆ–ಆಯುರ್ವೇದ–ವ್ಯಕ್ತಿತ್ವವಿಕಸನ" ಎಂಬ ವಿಷಯದ ಕುರಿತು ಕಾರ್ಯಾಗಾರವನ್ನು ನಡೆಸಲಾಯಿತು.
- ಶಿವಮೊಗ್ಗದ ಜಿಲ್ಲಾ ಕಾರಗೃಹದಲ್ಲಿ ಭಗವದ್ಗೀತಾ ಅಭಿಯಾನದ ಕಾರ್ಯಕ್ರಮವು ಪರಮ ಪೂಜ್ಯ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳ ಅಶೀರ್ವಚನದ ನುಡಿಗಳಿಂದ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಖೈದಿಗಳಿಗೆ 7 ದಿನಗಳ ಕಾಲ ಶ್ಲೋಕಗಳನ್ನು ಹೇಳಿಕೊಡಲಾಯಿತು. ಪರಮ ಪೂಜ್ಯರ ಅಮೃತ ಹಸ್ತದಿಂದ ಪುಸ್ತಕಗಳನ್ನು ಆಶೀರ್ವಾದ ರೂಪವಾಗಿ ಖೈದಿಗಳು ಪಡೆದುಕೊಂಡರು.
- ಪರಮ ಪೂಜ್ಯರ ಅನುಜ್ಞೆಯಂತೆ ಶಿವಮೊಗ್ಗದ ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಮತ್ತು ನಂಜಪ್ಪ ಆಸ್ಪತ್ರೆಯಲ್ಲಿ ಈ ಒಂದು ತಿಂಗಳ ಅವಧಿಯಲ್ಲಿ ಅಲ್ಲಿಯ ರೋಗಿಗಳಿಗೆ ಭಗವದ್ಗೀತಾ ಪುಸ್ತಕಗಳನ್ನು ವಿತರಿಸಲಾಯಿತು.

9. ಒಂದೇ ದಿನ ಬೆಳಗ್ಗೆ ಮತ್ತೂರಿನಲ್ಲಿ ಆಶೀರ್ವಚನ ನೀಡಿ, ಸಂಜೆ ಹೊಸನಗರಕ್ಕೆ ತೆರಳಿ, ಅಲ್ಲಿಯ ಭಕ್ತರಿಗೆ ಆಶೀರ್ವಚನ ನೀಡಿ, ನಂತರ ರಾತ್ರಿ 11 ಗಂಟೆಗೆ ಹೊಸಳ್ಳಿಗೆ ತೆರಳಿ ಅಲ್ಲಿಯ ನಾಗರಿಕ ಭಕ್ತರಿಗೆ ಆಶೀರ್ವಚನ ನೀಡಿರುವುದು ಉಲ್ಲೇಖಿಸಬಹುದಾದ ಸಂಗತಿ.

10. ಸ್ವತಃ ಮಹಾಸ್ವಾಮಿಗಳು ಮಾಧವನೆಲೆ, ಕಾರಾಗೃಹ, ಶಿವಗಂಗಾ ಮತ್ತು ಮಧುಕೃಪಾ ಯೋಗಕೇಂದ್ರಗಳು, ಕೆಲವು ಶಾಲಾಕಾಲೇಜುಗಳು, ಕೈಗಾರಿಕಾ ಕೇಂದ್ರಗಳಿಗೆ ಭೇಟಿಕೊಟ್ಟು ಭಗವದ್ಗೀತೆಯ ಮಹತ್ವದ ಕುರಿತು ಪ್ರವಚನ ನೀಡಿರುತ್ತಾರೆ. ಕೆಲವು ಶಾಲಾಕಾಲೇಜುಗಳಲ್ಲಿ ನಿನ್ನೆಯವರೆಗೂ 11 ನೇ ಅಧ್ಯಾಯದ ಶ್ಲೋಕ ಪಠಣ ಕೇಂದ್ರಗಳು ನಡೆದಿರುವುದು ಉಲ್ಲೇಖಿಸಬೇಕಾಗಿರುವ ಸಂಗತಿ.

11. ಅಭಿಯಾನದ ಎಲ್ಲಾ ಕಾರ್ಯಗಳಲ್ಲಿ ಸಾವಿರಾರು ಕಾರ್ಯಕರ್ತರು, ಪ್ರಶಿಕ್ಷಕರು, ಯೋಗಕೇಂದ್ರಗಳು, ದೇವಸ್ಥಾನಗಳು, ಭಜನಾಮಂಡಳಿಗಳು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

12. ವಿದ್ಯಾರ್ಥಿಗಳ ಗೀತಾಕಲಿಕೆಯ ಬಗ್ಗೆ ಆಸಕ್ತಿಮೂಡಿಸಲು ಹಾಗೂ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಕಂಠಪಾಠ ಸ್ಪರ್ಧೆ, ಭಾಷಣಸ್ಪರ್ಧೆ ಹಾಗೂ ರಸಪ್ರಶ್ನೆ ಸ್ಪರ್ಧೆಗಳನ್ನು ಮೂರು ಹಂತಗಳಲ್ಲಿ ನಡೆಸಲಾಗಿದೆ. ವಿಜೇತರಿಗೆ ಬಹುಮಾನವಿತರಣೆ ಮಾಡಲಾಗಿದೆ. ಜಿಲ್ಲಾ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿಜೇತರನ್ನು ರಾಜ್ಯಮಟ್ಟದ ಕಂಠಪಾಠ, ಭಾಷಣ ಹಾಗೂ ರಸಪ್ರಶ್ನೆ ಸ್ಪರ್ಧೆಗಳನ್ನು ನಡೆಸಲಾಯಿತು. ಸುಮಾರು 18 ಜಿಲ್ಲೆಗಳಿಂದ 210 ಸ್ಪರ್ಧಿಗಳು ಭಾಗವಹಿಸಿದ್ದಾರೆ. ಆ ಪೈಕಿ ಪ್ರಥಮ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ವಿಜೇತರಿಗೆ ಈ ದಿನ ಗಣ್ಯರಿಂದ ಬಹುಮಾನ ವಿತರಣೆ ನಡೆಯಲಿದೆ. ಎಲ್ಲಾ ಸ್ಪರ್ಧಿಗಳಿಗೆ ಶುಭಾಶಯ ಹೇಳುತ್ತಾ, ವಿಜೇತರಿಗೆ ನಾವೆಲ್ಲರೂ ಅಭಿನಂದನೆಗಳನ್ನೂ ಸಲ್ಲಿಸೋಣ. ಈ ಸ್ಪರ್ಧೆಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸಲು ಕಾರಣೀಕರ್ತರಾದ ಸ್ಪರ್ಧಾಸಮಿತಿಯವರಿಗೆ, ತೀರ್ಪುಗಾರರಿಗೆ ಹಾಗೂ ಎಲ್ಲಾ ಕಾರ್ಯಕರ್ತರಿಗೆ ಅಭಿನಂದನೆಗಳು.

13. ಇನ್ನು ಈ ಅಭಿಯಾನ ಈ ಹಂತದವರೆಗೆ ತಲುಪಿದೆ ಎಂದರೆ, ಅದಕ್ಕೆ ಕಾರಣ ಸ್ವರ್ಣವಲ್ಲೀ ಮಹಾಸ್ವಾಮಿಗಳ ಸಂಕಲ್ಪ, ತಪೋಬಲ, ಕ್ರಿಯಾಶೀಲತೆ ಹಾಗೂ ಘನನೇತ್ರತ್ವವೇ ಕಾರಣ ಎಂದರೆ ತಾವೆಲ್ಲರೂ ಖಂಡಿತಾ ಒಪ್ಪುತ್ತೀರಿ ಎನ್ನುವುದು ನನ್ನ ವಿಶ್ವಾಸ, ಏಕೆಂದರೆ ಈ ಗೀತಾಭಿಯಾನದ ಸಂಘಟನೆಗಾಗಿ ಸ್ವಾಮಿಗಳು ಶ್ರೀಮಠದ ಉಳಿದೆಲ್ಲಾ ಕಾರ್ಯ ಒತ್ತಡಗಳ ನಡುವೆ ಕಳೆದ ಐದಾರು ತಿಂಗಳುಗಳಿಂದ ಶಿವಮೊಗ್ಗಕ್ಕೆ ಆಗಮಿಸಿ ಇಲ್ಲೇ 3–4 ದಿನಗಳು ವಾಸ್ತವ್ಯ ಹೂಡಿ ಎಲ್ಲಾ ತಾಲೂಕು ಕೇಂದ್ರಗಳಿಗೆ ಸ್ವತಃ ಭೇಟಿಕೊಟ್ಟು ಅಲ್ಲೆಲ್ಲಾ ವಿವಿಧ ಸಮಿತಿಗಳನ್ನು ರಚಿಸಿ, ಪ್ರತಿ ತಾಲೂಕಿನಲ್ಲಿ ಉಪನ್ಯಾಸಗಳನ್ನು ಮಾಡಿ, ಆ ಮೂಲಕ ಅಭಿಯಾನದ ಕಾರ್ಯಗಳನ್ನು ಚುರುಕುಗೊಳಿಸಿದ್ದಾರೆ.

14. ಮಹಾಸಮರ್ಪಣೆಯ ಸಿದ್ಧತೆಗೋಸ್ಕರ ಗಣ್ಯರನ್ನೊಳಗೊಂಡ ಸ್ವಾಗತ ಸಮಿತಿ, ಮತ್ತು ಅದರ ವಿವಿಧ ಉಪಸಮಿತಿಗಳನ್ನು ರಚಿಸಿಕೊಂಡು ಕಾರ್ಯ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

15. ಹೀಗೆ 2025 ರ ಜೂನ್ ತಿಂಗಳ ಮೂರನೇ ವಾರದಲ್ಲಿ ಆರಂಭವಾದ ಶ್ರೀ ಭಗವದ್ಗೀತಾ ಅಭಿಯಾನ 2025 ಈ ದಿನ 30–11–2025 ರಂದು ಮಹಾಸಮರ್ಪಣೆಯೊಂದಿಗೆ ಸಂಪನ್ನಗೊಳ್ಳುತ್ತಿರುವುದಕ್ಕೆ ತಾವೆಲ್ಲರೂ ಸಾಕ್ಷಿಯಾಗಲಿದ್ದೀರಿ.

**ಎಲ್ಲರಿಗೂ ನಮಸ್ಕಾರ**

**॥ ಶ್ರೀ ಕೃಷ್ಣಾರ್ಪಣಮಸ್ತು ॥**

**ವಿಶ್ವಮಾತಾ । ಭಗವದ್ಗೀತಾ ।**